# ನವಿಲುಗನ್ನಡಿ

- ಜೂನ್ ಸಂಚಿಕೆ ಆಕರ್ಷಕವಾಗಿ ಮೂಡಿಬಂದಿದೆ. ಎಂ.ಆರ್. ಭಗವತಿ ಅವರ ನೀಲಿ ರಾಜಪಕ್ಷಿ ಹಾಗೂ ಲೋಕೇಶ್ ಮೊಸಳೆ ಅವರ ಹೊಳೆ ವಿಹಾರಿ (ಗ್ಯಾಲರಿ) ಚಿತ್ರಗಳು ಆಕರ್ಷಕವಾಗಿವೆ. ಎಂ.ಎಸ್. ಶ್ರೀರಾಮ್ ಅವರ 'ಪಠಣ ಕುತೂಹಲ' ಹಾಗೂ ಕರ್ಕಿ ಕೃಷ್ಣಮೂರ್ತಿ ಅವರ 'ಇಮೋಜಿ ಭಾಷೆ' ಅಂಕಣಗಳು ವಿಚಾರಪೂರ್ಣ ವಿಷಯಗಳಿಂದ ಗಮನ ಸೆಳೆದವು.

**ಆರ್. ಮಣಿ, ಮೈಸೂರು**

- ಲೇಖಕ ಬರಗೂರು ರಾಮಚಂದ್ರಪ್ಪ ಅವರೊಂದಿಗೆ ವಿಕ್ರಂ ವಿಸಾಜಿ ಅವರು ನಡೆಸಿದ ಸಂದರ್ಶನ (ನಾನು ಜಡಪಂಥೀಯ ಅಲ್ಲ, ಸದಾ ಜನಪಂಥೀಯ) ಅರ್ಥಪೂರ್ಣ. ಸಂದರ್ಶನವು ಬರಗೂರರ ಬಾಲ್ಯ, ಜೀವನ, ಹೋರಾಟ, ವೈಚಾರಿಕ ಚಿಂತನೆಯ ಪರಿಚಯ ಮಾಡಿಸುತ್ತದೆ.

**ದೇವಿಂದ್ರ ಬರಗಾಲೆ, ಬಸವಕಲ್ಯಾಣ**




- ಬರಗೂರರು ತಮ್ಮನ್ನು ತಾವು 'ಜನಪಂಥೀಯ' ಎಂದು ಕರೆದುಕೊಂಡಿರುವುದು ಈ ಸಂದರ್ಭದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.

**ಬಾ.ಹ. ರಮಾಕುಮಾರಿ, ತುಮಕೂರು**

- ಕೇಶವರೆಡ್ಡಿ ಹಂದ್ರಾಳರ 'ಅಕ್ಕಯ್ಯಮ್ಮನ ಆಮ್ಲೆಟ್ ಅಂಗಡಿ' ಮಾರ್ಮಿಕ ಕತೆ. ಗ್ರಾಮೀಣ ಬದುಕಿನ ವಿವರಗಳು ಸಮೃದ್ಧವಾಗಿ ವ್ಯಾಪಿಸಿಕೊಂಡಿವೆ. ಅಕ್ಕಯ್ಯಮ್ಮನ ಪಾತ್ರವು ಕೊನೆಯವರೆಗೂ ತನ್ನ ನೋವನ್ನು ತಾನೇ ನುಂಗಿಕೊಂಡು ಬದುಕಬೇಕು ಎಂಬುದನ್ನು ಹಂದ್ರಾಳರು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಕಾರಣದಿಂದಾಗಿ ಆ ಪಾತ್ರ ಓದುಗರ ಮನಸ್ಸಿನಲ್ಲಿ ದಟ್ಟವಾಗಿ ಉಳಿಯುವಂತೆ ನೋಡಿಕೊಂಡಿದ್ದಾರೆ.

**ಶೂದ್ರ ಶ್ರೀನಿವಾಸ್, ಬೆಂಗಳೂರು**
**ಎಂ.ಜಿ. ರಂಗಸ್ವಾಮಿ, ಹಿರಿಯೂರು**
**ಗಿರೀಶ ಸೊಲ್ಲಾಪುರ, ಲಿಂಗಸುಗೂರು**

- ಅನುವಾದಿತ ಕತೆ 'ದಮಯಂತಿಯ ಮಗಳು' (ಮೂಲ: ಪಿ. ಸತ್ಯವತಿ, ಕನ್ನಡಕ್ಕೆ: ಅಜಯ್ ವರ್ಮಾ ಅಲ್ಲೂರಿ) ಸರಳವಾಗಿ ಓದಿಸಿಕೊಂಡು ಹೋಗುತ್ತದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಈ ಸಂಚಿಕೆಯ ಕತೆಗಳು ಒಂದಕ್ಕಿಂತ ಒಂದು ಸೊಗಸಾಗಿವೆ. 'ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿ', ಕೆ.ವಿ. ರಾಜಲಕ್ಷ್ಮಿ ಅವರ 'ತೇಪೆ' ಕತೆಗಳು ತಮ್ಮ ಸರಳ ನಿರೂಪಣೆ, ಸುಲಲಿತ ಭಾಷೆಯಿಂದ ವಿಭಿನ್ನವಾಗಿ ಮೂಡಿಬಂದಿವೆ.

**ನೀಲಮ್ಮ ಲಿಂಗಸುಗೂರು, ರಾಯಚೂರು**

- ಆದರ್ಶ ವಿಜಯಲಕ್ಷ್ಮಿ ಅವರ ಕತೆ 'ಚಂಪಾ ಪ್ರಸ್ಥಾನ' ಓದಿಸಿಕೊಂಡು ಹೋಗುತ್ತದೆ. ವಿಭಿನ್ನ ಪಾತ್ರಗಳಿಂದ, ಊಹಿಸಲಾಗದ ತಿರುವುಗಳಿಂದ ಕತೆ ಗಮನಸೆಳೆಯುತ್ತದೆ.

**ಅಂಬಿಕಾ ಪತ್ತಾರ, ವಿಜಯಪುರ**

- ರೇಣುಕಾ ನಿಡಗುಂದಿ ಹಾಗೂ ಹಂದಲಗೆರೆ ಗಿರೀಶ್ ಅವರ ಕವಿತೆಗಳು ತುಂಬಾ ಸೊಗಸಾಗಿವೆ.

**ರುದ್ರಗೌಡ ಬಿರಾದರ, ಬಾಗಲಕೋಟೆ**